ಓ.ಎಸ್.ನಂ.25-2019

ಪಿ.ಡಬ್ಲ್ಯೂ-1.

**ದಿಃ 30-07-2019 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯವಿಚಾರಣೆ ಃ ವಾದಿ ಪರ** ಶ್ರೀ.ಕೆ.ಎಲ್.ಆರ್ **ವಕೀಲರಿಂದ.**

ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿರುವ ಎಲ್ಲಾ ಸಂಗತಿಗಳು ನನ್ನ ಸ್ವಂತ ಮಾಹಿತಿ ಮೇರೆಗೆ ಹೇಳಿ ಬರೆಸಿದ್ದು ಅವು ಸತ್ಯವಾಗಿರುತ್ತವೆ. ಪ್ರಮಾಣಪತ್ರದಲ್ಲಿನ ಸಂತಿಗಳನ್ನು ತಿಳಿದುಕೊಂಡು ಸಹಿ ಮಾಡಿರುತ್ತೇನೆ.

ಸಾಕ್ಷಿಯು ಹಾಜರುಪಡಿಸಿರುವ ಆರು ಪಹಣಿ ಪತ್ರಿಕೆಗಳನ್ನು ನಿಪಿ-1 ರಿಂದ ನಿಪಿ-6 ಎಂದು ಗುರುತಿಸಲಾಯಿತು. ನಾಲ್ಕು ಮ್ಯುಟೇಷನ್ ರಿಜಿಸ್ಟರ್ ಗಳನ್ನು ನಿಪಿ-7 ರಿಂದ ನಿಪಿ-10 ಎಂದು, ಹಾಲಪ್ಪನವರ ಮರಣ ಪ್ರಮಾಣಪತ್ರವನ್ನು ನಿ-ಪಿ-11 ಎಂದು, ವಂಶವೃಕ್ಷವನ್ನು ನಿ-ಪಿ-12 ಎಂದು, ಶಾಲಾ ದಾಖಲಾತಿ ದೃಢೀಕರಣ ಪತ್ರವನ್ನು ನಿಪಿ-13 ಎಂದು, ಸಾಕ್ಷಿಯ ವಿವಾಹ ಆಮಂತ್ರಣ ಪತ್ರಿಕೆಯನ್ನು ನಿಪಿ-14 ಎಂದು, ದಿನಾಂಕ.24.7.1996 ರ ವಿಭಾಗಪತ್ರದ ದೃಢೀಕೃತ ನಕಲನ್ನು ನಿಪಿ-15 ಎಂದು ಗುರುತಿಸಲಾಯಿತು. ದಿ.1.9.2010 ರ ವಿಭಾಗಪತ್ರದ ದೃಢೀಕೃತ ನಕಲನ್ನು ನಿಪಿ-16 ಎಂದು ಗುರುತಿಸಲಾಯಿತು. ದಿ.11-2-2011 ರ ಕ್ರಯಪತ್ರದ ದೃಢೀಕೃತ ನಕಲನ್ನು ನಿಪಿ-17 ಎಂದು ಗುರುತಿಸಲಾಯಿತು. ದಿ.16.4.2013 ರ ವಿಭಾಗಪತ್ರದ ದೃಢೀಕೃತ ನಕಲನ್ನು ನಿಪಿ-18 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ** ಪ್ರತಿವಾದಿ ಪರ ಎಂ ಎಲ್ ವಕೀಲರು ಕಾಲಾವಕಾಶ ಕೋರಿದ್ದು ಪ್ರತಿವಾದಿ ಪರ ವಕೀಲರ ಕೋರಿಕೆಯನ್ನು ತಿರಸ್ಕರಿಸಿ ಅವರ ಪರ ಪಾಟೀ ಸವಾಲು ಇಲ್ಲಾ ಎಂದು ತೆಗೆದುಕೊಳ್ಳಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಕೇ. ಸ. ಇ. ಎ. ಒ.

ಸಿವಿಲ್ ನ್ಯಾಯಾಧೀಶರು ಮತ್ತು ಹೆಚ್ಚುವರಿ
ಪ್ರ.ದ.ನ್ಯಾ.ದಂ. ರವರು, ತರೀಕೆರೆ.